# ಪುಣ್ಯಸ್ಮೃತಿ

ಮೂಲ ಬಂಗಾಳಿ : **ಚಂದ್ರಮೋಹನ ದತ್ತ** ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

**ಭಾಗ ೧**

**ನಾ**ವು ಪೂರ್ವ ಬಂಗಾಳದವರು.* ಈಗಿನ ಬಾಂಗ್ಲಾದೇಶದ ಢಾಕಾ ಜಿಲ್ಲೆಯ ವಿಕ್ರಮ್‌ಪುರ್ ತಾಲ್ಲೂಕಿಗೆ ಸೇರಿದ ಗಾವುಪಾಡ ಗ್ರಾಮ ನಮ್ಮ ಊರು. ಗ್ರಾಮದ ಎಲ್ಲ ಕುಟುಂಬದವರೂ ಸುಶಿಕ್ಷಿತರಾದ ವೈದ್ಯರು; ಅಲ್ಲಿ ನಾವು ಮಾತ್ರ ಕಾಯಸ್ಥರ ದತ್ತ-ಪರಿವಾರದವರು. ನಮ್ಮದು ಅವಿಭಕ್ತ ಕುಟುಂಬವಾಗಿತ್ತು. ಬೇರೆ ಸ್ಥಿತಿವಂತ ಕುಟುಂಬಗಳಂತೆ ನಮಗೂ ಮಾವು, ಹಲಸುಗಳ ತೋಟ, ಬಾವಿಯಿಂದ ಕೂಡಿದ ಸಾಕಷ್ಟು ಎಕರೆ ಜಮೀನು-ಇವುಗಳ ಜೊತೆಗೆ ನಮ್ಮ ವಸತಿ, ಮನೆ ಇದ್ದವು. ಬಂಗಾಳ ಎರಡಾಗಿ ಪ್ರತ್ಯೇಕಗೊಳ್ಳುವ ಮೊದಲೇ ಅದೆಲ್ಲವೂ ಪದ್ಮಾನದಿಯಲ್ಲಿ ಮುಳುಗಿಹೋಯಿತು.

೧೯೧೦ರಲ್ಲಿ ನಾನು ಉದ್ಯೋಗ ಹುಡುಕುತ್ತ ಕಲ್ಕತ್ತೆಗೆ ಬಂದೆ. ನಾನೇ ದುಡಿದ ಹಣದಲ್ಲಿ ನನ್ನ ಖರ್ಚುಗಳನ್ನು ನಿಭಾಯಿಸೋಣ — ಇದು ನನ್ನ ಇಚ್ಛೆಯಾಗಿತ್ತು. ಆಗ ನನ್ನ ವಯಸ್ಸು ಮೂವತ್ತು. ಕುಟುಂಬದಲ್ಲಿ ಯಾವುದೋ ಮಾತಿನಿಂದಾಗಿ ನನ್ನ ಆತ್ಮಗೌರವಕ್ಕೆ ಧಕ್ಕೆಯುಂಟಾಗಿ, ನನ್ನ ಪತ್ನಿ ಹಾಗೂ ಮಕ್ಕಳನ್ನು ಹಳ್ಳಿಯಲ್ಲೇ ಬಿಟ್ಟು ನಾನು ಕಲ್ಕತ್ತೆಗೆ ಬಂದಿದ್ದೆ. ಅಲ್ಲಿ ನನ್ನ ದೊಡ್ಡಣ್ಣ ಕಾಳೀಕುಮಾರ ದತ್ತನ ಬಳಿಗೆ ಬಂದೆ — ನಾವೆಲ್ಲ ಕಲ್ಕತ್ತೆಗೆ ಬರುವುದಕ್ಕೆ ಮೊದಲೇ ಅವನು ಕಲ್ಕತ್ತೆಯ ಶೋಭಾಬಜಾರಿನಲ್ಲಿ ಬಾಡಿಗೆ ಮನೆ ಮಾಡಿಕೊಂಡು ವಾಸವಾಗಿದ್ದ. ಅವನು ರೈಲ್ವೇಯಲ್ಲಿ ಕೆಲಸ ಮಾಡುತ್ತಿದ್ದ.

ದೊಡ್ಡಣ್ಣನ ಬಳಿಗೆ ಬಂದ ಕೆಲವೇ ದಿನಗಳಲ್ಲಿ ನನಗೆ ಒಂದು ತಿಂಡಿ ಅಂಗಡಿಯಲ್ಲಿ ಲೆಕ್ಕ ಬರೆಯುವ ಕೆಲಸ ಸಿಕ್ಕಿತು. ಸಂಬಳ, ಊಟ-ಬಟ್ಟೆ ಬರೆ ಏನೂ ಇಲ್ಲ ಒಂದು ರೀತಿಯ apprentice(ವೇತನರಹಿತ ತರಬೇತಿ). ಕೆಲವು ತಿಂಗಳು ಹೀಗೆ 'ಮನೆ ಅನ್ನ ತಿಂದು ಕೊಬ್ಬಿದ ಕಾಡೆಮ್ಮೆಯನ್ನು ಅಟ್ಟಿ'ದಂತೆ, ವ್ಯರ್ಥವಾದ ಆ ಕೆಲಸವನ್ನು ಬಿಟ್ಟು ನಾನೇ ಶೋಭಾಬಜಾರಿನಲ್ಲಿ ಒಂದು ಕೋಣೆಯನ್ನು ಬಾಡಿಗೆಗೆ ತೆಗೆದುಕೊಂಡು ದಿನಸಿ ಅಂಗಡಿಯನ್ನು ತೆರೆದೆ. ಅಷ್ಟೇನೂ ವ್ಯಾಪಾರ ಇರಲಿಲ್ಲ. ಒಂದು ದಿನ ಅಂಗಡಿಯ ಮುಂದೆ ಬಾಗಿಲಲ್ಲಿ ಮಸಿಯಿಂದ ಬರೆದ ಒಂದು ಕಾಗದವನ್ನು ಹಚ್ಚಿ ಹೋಗಿದ್ದರು. ಅದರಲ್ಲಿ ಬರೆದಿತ್ತು: 'ಮುಂದಿನ ಭಾನುವಾರ ಬೇಲೂರು ಮಠದಲ್ಲಿ ಶ್ರೀರಾಮಕೃಷ್ಣ ಪರಮಹಂಸರ ಜನ್ಮಮಹೋತ್ಸವ ಜರುಗುವುದು. ನೀವೆಲ್ಲರೂ ಬಹುಸಂಖ್ಯೆಯಲ್ಲಿ ಬಂದು ಅದರಲ್ಲಿ ಪಾಲ್ಗೊಳ್ಳಿರಿ.'



ಅದಕ್ಕೆ ಮೊದಲು ನಾನೆಂದೂ ಶ್ರೀರಾಮಕೃಷ್ಣರ ಹೆಸರನ್ನು ಕೇಳಿರಲಿಲ್ಲ. ಅವರು ನಿಜವಾಗಿಯೂ ಮಹಾಪುರುಷರೇ ಇರಬೇಕು. ಇಲ್ಲದಿದ್ದರೆ ಹೀಗೆ ಏಕೆ ಬರೆದು ಪ್ರಚಾರ ಮಾಡುತ್ತಿದ್ದರು? ಹೀಗೆ ನನಗನ್ನಿಸಿತು. ಕಲ್ಕತ್ತೆಯಲ್ಲಿ ನಡೆಯಲಿರುವ ಉತ್ಸವದ ಬಗ್ಗೆ ನನಗೇನೂ ಗೊತ್ತಿರಲಿಲ್ಲ. ಆದ್ದರಿಂದ, ಅಲ್ಲಿಗೆ ಹೋಗಿ ಅದನ್ನು ನೋಡಲು ನನಗೆ ತುಂಬಾ ಆಸೆಯುಂಟಾಯಿತು. ಆ ಬಗ್ಗೆ ತಿಳಿಯುವ ಉತ್ಸುಕತೆಯಿಂದ ನಾನು ಪಕ್ಕದ ಅಂಗಡಿಯ ವೃದ್ಧರನ್ನು ಕೇಳಿದೆ, ''ಮಹಾಶಯರೇ, ಪರಮಹಂಸ ದೇವರು ಯಾರು? ಮುಂದಿನ ಭಾನುವಾರ ಬೇಲೂರು ಮಠದಲ್ಲಿ ಅವರ ಜನ್ಮ ಮಹೋತ್ಸವ ನಡೆಯುವುದು. ಅದರ ಬಗ್ಗೆ ನಿಮಗೇನಾದರೂ ತಿಳಿದಿದಿಯೆ? ತಿಳಿದಿದ್ದರೆ ದಯವಿಟ್ಟು ಅದೇನೆಂದು ತಿಳಿಸಿಕೊಡಿ.'' ಆ ವೃದ್ಧ ಸ್ವಲ್ಪ ಹೊತ್ತು ನನ್ನತ್ತ ನೋಡಿ ಹೇಳಿದರು: ''ನಿಮ್ಮಲ್ಲಿ ಅಷ್ಟೊಂದು ಕಾತರತೆಯನ್ನು ನೋಡುತ್ತಿದ್ದೇನೆ. ಮಹಾಪುರುಷರುಗಳ ಬಗ್ಗೆ ಶ್ರದ್ಧೆ, ಭಕ್ತಿ ಹೊಂದಿರುವುದು ತುಂಬಾ ಒಳ್ಳೆಯದು. ಹೌದು, ಕಳೆದ ವರ್ಷ ನಾನು ಬೇಲೂರು ಮಠಕ್ಕೆ ಹೋಗಿದ್ದೆ. ನಿಮಗೇನು ಹೇಳಲಿ ಸ್ವಾಮಿ, ಎಷ್ಟು ಸಾಧ್ಯವೋ ಅಷ್ಟು ಖಿಚಡಿ, ಪೂರಿ, ಬೂಂದಿ, ಹಲ್ವಾ

*(ಈ ಸ್ಮೃತಿಲೇಖನವು ಲೇಖಕರ ಮಗ ಕಾರ್ತಿಕಚಂದ್ರ ದತ್ತರಿಂದಾಗಿ ಲಭಿಸಿತು)

ಪ್ರಸಾದ ಇವನ್ನೆಲ್ಲಾ ತಿನ್ನಬಹುದು.'' ನಾನು ಕೇಳಿದೆ: ''ಬೇಲೂರು ಮಠ ಎಲ್ಲಿದೆ? ಅಲ್ಲಿಗೆ ಹೋಗುವುದು ಹೇಗೆ?'' ಅದಕ್ಕೆ ವೃದ್ಧ ಹೇಳಿದ, ''ಅಹಿರಿತೊಲಾ ಘಾಟ್‌ನಿಂದ ಬೆಳಿಗ್ಗೆ ಏಳು ಗಂಟೆಗೆ ಬೇಲೂರು ಮಠಕ್ಕೆ ಹೋಗಲು ಸ್ಟೀಮರ್ ಸಿಗುತ್ತದೆ. ನೀವು ಅದರಲ್ಲಿ ಹತ್ತಿ ಕುಳಿತು ಅಲ್ಲಿಗೆ ಹೋಗಿ, ಏನೂ ತೊಂದರೆಯಾಗದು.''

ಕಲ್ಕತ್ತೆಗೆ ನಾನು ಬಂದು ಹೆಚ್ಚು ದಿನಗಳಾಗಿರಲಿಲ್ಲ. ರಸ್ತೆ, ಘಾಟ್ ಇವುಗಳೆಲ್ಲ ಚೆನ್ನಾಗಿ ಪರಿಚಿತವಾಗಿರಲಿಲ್ಲ. ಆದ್ದರಿಂದ ಪರಿಚಯವಿದ್ದ ಒಂದಿಬ್ಬರು ಹುಡುಗರನ್ನು ಕೇಳಿದೆ: ''ನಾಳೆ ಬೇಲೂರು ಮಠದಲ್ಲಿ ಶ್ರೀರಾಮಕೃಷ್ಣ ಪರಮಹಂಸರ ಜನ್ಮದಿನೋತ್ಸವ ನಡೆಯಲಿದೆ. ಉತ್ಸವದಲ್ಲಿ ಒಳ್ಳೆಯ ಪ್ರಸಾದದ ವ್ಯವಸ್ಥೆ ಇರುತ್ತದೆ. ನನ್ನ ಜೊತೆಗೆ ನೀವು ಬರುತ್ತೀರಾ?'' ಅದಕ್ಕೆ ಅವರು ಒಪ್ಪಿದರು.

ಪರಮಹಂಸದೇವರ ಪ್ರಸಾದಕ್ಕಿಂತಲೂ, ಪರಮಹಂಸದೇವರ ದರ್ಶನವನ್ನು ಪಡೆಯುವ ಬಯಕೆ ನನ್ನಲ್ಲಿ ಅಧಿಕವಾಗಿಬಿಟ್ಟಿತು. ನಾನು ವಾಸವಾಗಿದ್ದ ಮನೆಗೆ ಹೋಗದೆ, ಐದು ಪೈಸೆಗೆ ಕಡಲೆಪುರಿ, ಬತ್ತಾಸು ಕೊಂಡುಕೊಂಡು ತಿಂದು, ಅಂಗಡಿಯ ಮುಂದಿನ ಜಗಲಿಯಲ್ಲಿ ಮಲಗಿ ನಿದ್ರಿಸಿದೆ. ಪರಮಹಂಸದೇವರ ಉತ್ಸವಕ್ಕೆ ಹೋಗುತ್ತೇನೆ — ಎಂಬ ಆನಂದ, ಉತ್ಸುಕತೆಗಳಿಂದ ನನಗೆ ನಿದ್ದೆ ಬರುತ್ತಿಲ್ಲ. ಏನು ಮಾಡಿದರೂ ರಾಮಕೃಷ್ಣ ಎಂಬ ಹೆಸರಿನ ಪರಮಹಂಸರನ್ನು ತಲೆಯಿಂದ ದೂರ ಮಾಡಲಾಗುತ್ತಿಲ್ಲ. ನೀರಿನ ಸುಳಿಯಂತೆ ತಲೆಯಲ್ಲಿ ಅದು ಸುತ್ತುತ್ತಲೇ ಇತ್ತು. ಪರಮಹಂಸರ ಆಲೋಚನೆ ಮನಸ್ಸಿನಿಂದ ಹೋಗುವುದೇ ಇಲ್ಲ ಎಂದಾದ ಮೇಲೆ, ಅವರನ್ನು ಕುರಿತು ಆಲೋಚಿಸುತ್ತಲೇ ರಾತ್ರಿಯೆಲ್ಲ ಕಳೆಯುವುದೆಂದು ನಾನು ನಿಶ್ಚಯ ಮಾಡಿಕೊಂಡೆ. ಶ್ರೀರಾಮಕೃಷ್ಣರ ಬಗ್ಗೆ ಚಿಂತಿಸುತ್ತ ನಾನು ನಿದ್ದೆಗೆ ಜಾರಿದೆ. ಆಗ ನನಗೊಂದು ಕನಸು ಬಿತ್ತು. ದೊಡ್ಡ ಒಂದು ಬಯಲಿನಲ್ಲಿ ಅನೇಕ ಮಂದಿ ಸೇರಿದ್ದರು. ನಾನಾ ಬಗೆಯ ಪಟಾಕಿ, ಬೆಳಕಿನ ಬಾಣಗಳು ಅಲ್ಲಿ ಕಣ್ಣು ಕೋರೈಸುತ್ತಿದ್ದವು. ಜನಜಂಗುಳಿಯಲ್ಲಿ ನನ್ನನ್ನು ಜನರು ಜೋರಾಗಿ ತಳ್ಳಿ, ನಾನು ಅತ್ತಿತ್ತ ಓಲಾಡಿದೆ. ಹಠಾತ್ತಾನೆ ಒಬ್ಬ ದಪ್ಪನೆಯ ಕಪ್ಪು ವ್ಯಕ್ತಿ ಬಂದು, ನನ್ನನ್ನು ಜೋರಾಗಿ ತಳ್ಳಿಬಿಟ್ಟ; ನಾನು ನಿದ್ದೆ ಬಿಟ್ಟೆದ್ದೆ. ನಿಜವಾಗಿ, ಒಬ್ಬ ಪೋಲೀಸ್ ನನ್ನನ್ನು ತಳ್ಳಿ, ''ಏಳಯ್ಯ, ಎದ್ದೇಳು'' ಎನ್ನುತ್ತಿದ್ದ. ಪಹರೆ ಕಾಯುತ್ತಿದ್ದ ಆ ಪೋಲೀಸನಿಗೆ ನಾನು ಕೇಳಿದೆ, ''ಏನಾಯಿತು? ಯಾಕೆ ನನ್ನನ್ನು ತಳ್ಳುತ್ತಿದ್ದೀಯಾ?'' ಅವನು ಹೇಳಿದ, ''ನೀನೇಕೆ ಹೊರಗೆ ಮಲಗಿದ್ದೀಯಾ? ಪೋಲೀಸ್ ಸ್ಟೇಶನ್ನಿಗೆ ನೀನು ಬರಬೇಕಾಗುತ್ತದೆ''. ನಾನೆಂದೆ, ''ಇದು ನನ್ನದೇ ಅಂಗಡಿಯ ಜಗಲಿ.'' ಅದನ್ನು ಕೇಳಿದ ಪೋಲೀಸ್ ಸುಮ್ಮನಾಗಿ ಹೊರಟುಹೋದ. ಆ ಕಾಲದಲ್ಲಿ ಹೊರಗೆ ನಿದ್ದೆ ಮಾಡಿದರೆ ಪೋಲೀಸರು ಈ ರೀತಿ ವಿಚಾರಿಸುತ್ತಿದ್ದರು. ಸರಿಯಾದ ಉತ್ತರ ನೀಡಿದರೆ ಬಿಟ್ಟುಬಿಡುತ್ತಿದ್ದರು.

ಬೆಳಗಾಯಿತು. ಹಿಂದಿನ ರಾತ್ರಿ ಬೇಲೂರು ಮಠಕ್ಕೆ ನನ್ನೊಂದಿಗೆ ಹೋಗುವುದಾಗಿ ಹೇಳಿದ್ದ ಇಬ್ಬರು ಹುಡುಗರ ಮನೆಗೆ ಹೋಗಿ ಅವರನ್ನು ಭೇಟಿಯಾದೆ. ಆದರೆ, ಅವರಿಬ್ಬರೂ ನನ್ನೊಂದಿಗೆ ಬರಲಾಗುವುದಿಲ್ಲ ಎಂದು ತಿಳಿಸಿದರು. ನನಗೆ ತುಸು ಬೇಜಾರಾಗಿ ಅಂಗಡಿಗೆ ಮರಳಿದೆ. ಅಲ್ಲಿ ನಾನು ಆಲೋಚಿಸುತ್ತ ಕುಳಿತೆ, ಉತ್ಸವಕ್ಕೆ ಹೋಗುವುದೇ ಬೇಡವೇ ಎಂದು. ಒಂದೆಡೆ, ಅಲ್ಲಿಗೆ ಹೋಗಬೇಕೆಂದು ತುಂಬಾ ಆಸೆ. ಆ ಕನಸು ಬಿದ್ದ ನಂತರ ನನ್ನ ಆಸೆ ಇನ್ನಷ್ಟು ಹೆಚ್ಚಾಯಿತು. ಆದರೆ ಅಲ್ಲಿಗೆ ದಾರಿ, ಘಾಟ್ ಇತ್ಯಾದಿ ಯಾವುದೂ ನನಗೆ ಗೊತ್ತಿಲ್ಲ; ತಿಳಿಯದ ಸ್ಥಳಕ್ಕೆ ಒಬ್ಬಂಟಿಯಾಗಿ ಹೋಗಲು ಧೈರ್ಯವಾಗುತ್ತಿಲ್ಲ. ಏನೇ ಆಗಲಿ, ಹೋಗಿ ಬಿಡುತ್ತೇನೆ ಎಂದು ನಾನು ನಿರ್ಧರಿಸಿದೆ. ಪರಮಹಂಸರ ಹೆಸರನ್ನು ಹೇಳುತ್ತ ಹೊರಟುಬಿಡುತ್ತೇನೆ, ಮುಂದೇನು ಆಗುವುದೋ ಆಗಲಿ, ಎಂದು ನಾನಂದುಕೊಂಡೆ. ಹಾತ್‌ಖೋಲಾ ಘಾಟ್‌ನಲ್ಲಿ ಗಂಗಾಸ್ನಾನ ಮಾಡಿ, ಅಡ್ಡಪಂಚೆಯನ್ನು ಹೆಗಲಲ್ಲಿ ಸುತ್ತಿಕೊಂಡು, ಶ್ರೀರಾಮಕೃಷ್ಣರ ನಾಮವನ್ನು ಸ್ಮರಿಸುತ್ತಾ ಅಹರಿತೊಲಾ ಘಾಟ್‌ನತ್ತ ಹೊರಟೆ. ಘಾಟ್‌ನಲ್ಲಿ ಒಂದು ಸ್ಟೀಮರ್ ನಿಂತಿತ್ತು; ಅದರಲ್ಲಿ ತುಂಬಾ ಜನ ತುಂಬಿಕೊಂಡಿದ್ದರು. ಮುಂಜಾನೆಯೇ ಬೇಲೂರು ಮಠವನ್ನು ತಲುಪಿಬಿಡುತ್ತೇನೆ ಎಂದು ಭಾವಿಸಿ ನನಗೆ ಧೈರ್ಯವಾಯಿತು. ಹತ್ತು ಪೈಸೆ ಕೊಟ್ಟು ರಿಟರ್ನ್ ಟಿಕೆಟ್ ಖರೀದಿಸಿ, ಸ್ಟೀಮರ್ ಹತ್ತಿ ಕುಳಿತೆ. ಉತ್ಸವ ನೋಡುವ, ಪ್ರಸಾದವನ್ನು ಪಡೆಯುವ ನಿರೀಕ್ಷೆ ನನ್ನಲ್ಲಿ ತುಂಬಿಕೊಂಡಿತ್ತು. ಸ್ಟೀಮರ್ ಹೊರಡುವ ಸಿಳ್ಳು ಬಾರಿಸಿತು; ಸ್ಟೀಮರ್ ಹೊರಟಿತು. ಯಾತ್ರಿಕರಲ್ಲಿ ಬಹುಪಾಲು ಜನರು ಶಾಲೆ, ಕಾಲೇಜಿನ ವಿದ್ಯಾರ್ಥಿಗಳು. ಅವರೆಲ್ಲರೂ ಶ್ರೀರಾಮಕೃಷ್ಣರ ಹಾಗೂ ಸ್ವಾಮಿ ವಿವೇಕಾನಂದರ ಜಯಘೋಷ ಮಾಡಲಾರಂಭಿಸಿದರು. ಅವರ ಜಯಘೋಷವನ್ನು ಕೇಳಿ ಆವೇಶಭರಿತನಾದ ನಾನು ಹೇಳತೊಡಗಿದೆ: **''ಜೈ ರಾಮಕೃಷ್ಣ ದೇವ ಕಿ ಜೈ! ಜೈ ಸ್ವಾಮಿ ವಿವೇಕಾನಂದಜೀ ಕಿ ಜೈ!''** ಹೀಗೆ ಜಯಘೋಷ ಮಾಡುತ್ತ ನನಗೆ ತುಂಬಾ ಆನಂದವುಂಟಾಯಿತು. ಇಂಥ ಆನಂದದ ನಡುವೆ ನನಗೆ ಒಂದು ಬಗೆಯ ದಿವ್ಯ ಭಾವದ ಆನಂದವುಂಟಾಯಿತು. ಮನಸ್ಸಿನ ಚಾಂಚಲ್ಯ, ಉದ್ವೇಗ ಎಲ್ಲವೂ ಎಲ್ಲಿಗೋ ಓಡಿಹೋದಂತೆ ಅನ್ನಿಸತೊಡಗಿತು. ಮನಸ್ಸು ನಿರಾಳವಾಗತೊಡಗಿತು. ಒಂದು ಗಂಟೆಯ ಒಳಗಾಗಿ ಸ್ಟೀಮರ್ ಬೇಲೂರು ಮಠದ ಘಾಟನ್ನು ತಲುಪಿತು. ಘಾಟ್‌ನಲ್ಲಿ ನಿಂತಿದ್ದ ಭಕ್ತರ ಗುಂಪೊಂದು ಸ್ಟೀಮರ್‌ನಲ್ಲಿದ್ದ ಭಕ್ತರ ಕಡೆಗೆ ನೋಡಿ ಹೇಳುತ್ತಿದ್ದಾರೆ: ''ಜೈ ರಾಮಕೃಷ್ಣ ಪರಮಹಂಸದೇವ ಕೀ ಜೈ! ಜೈ ಸ್ವಾಮಿ ವಿವೇಕಾನಂದಜೀ ಕೀ ಜೈ!'' ಸ್ಟೀಮರಿನಲ್ಲಿದ್ದ ಭಕ್ತರೂ ಅವರೊಂದಿಗೆ ದನಿ ಸೇರಿಸಿ, ಜಯಕಾರ ಮಾಡತೊಡಗಿದರು. ಅವರೆಲ್ಲರ ಜಯಧ್ವನಿಯಿಂದ ಭೂಮಿ, ಆಕಾಶಗಳೆಲ್ಲವೂ ತುಂಬಿಹೋಯಿತು.

ಘಾಟ್‌ನಲ್ಲಿ ಕಾವಿ ಬಟ್ಟೆ ಧರಿಸಿದ್ದ, ದಿವ್ಯಕಾಂತಿಯಿಂದ ಕೂಡಿದ್ದ ಸಂನ್ಯಾಸಿಗಳೊಬ್ಬರು ನಿಂತಿದ್ದರು. ಸ್ಟೀಮರ್‌ನಿಂದ

ಇಳಿದ ಯಾತ್ರಿಕರು ಒಬ್ಬೊಬ್ಬರಾಗಿ ಬಂದು ಆ ಸಂನ್ಯಾಸಿಗಳಿಗೆ ಪ್ರಣಾಮ ಮಾಡತೊಡಗಿದರು. ಅವರು, ''ಜೈ ರಾಮಕೃಷ್ಣ!'' ಎನ್ನುತ್ತಿದ್ದರು. ನಾನೂ ಅವರಿಗೆ ಪ್ರಣಾಮ ಮಾಡಿದೆ; ನನಗೂ ಅವರು ಅದೇ ರೀತಿ ಹೇಳಿದರು. ಅನಂತರ ಆ ಸಂನ್ಯಾಸಿಗಳು ಕೈಯೆತ್ತಿ ನರ್ತಿಸುತ್ತ, ''ಜೈ ರಾಮಕೃಷ್ಣ ಪರಮಹಂಸ ದೇವ ಕೀ ಜೈ'' ಎನ್ನತೊಡಗಿದರು. ನಾವೂ ಅವರೊಂದಿಗೆ ದನಿ ಸೇರಿಸಿ ಜಯಕಾರ ಮಾಡಿದೆವು. ಆ ಕೂಡಲೇ ಜನರ ಗುಂಪೊಂದು ಅಲ್ಲಿಗೆ ಬಂತು. ಖೋಲ್, ಕರತಾಳಗಳೊಂದಿಗೆ ಅವರೆಲ್ಲ ಜೈಕಾರ ಮಾಡುತ್ತ ಸಂನ್ಯಾಸಿಯ ಸುತ್ತ ನರ್ತಿಸತೊಡಗಿದರು. ನಾನು ಆ ದಿವ್ಯಕಾಂತಿಯುಳ್ಳ, ಜ್ಯೋತಿರ್ಮಯ ಸಂನ್ಯಾಸಿಗಳ ಕಡೆಗೆ ನೋಡುತ್ತಲೇ ಇದ್ದೆ; ನನ್ನ ಮನಸ್ಸು ಆಗ ಭಕ್ತಿಯಿಂದ ತುಂಬಿ ಹೋಯಿತು. ಯಾರನ್ನೋ ಕೇಳಿ ತಿಳಿದೆ, ಅವರೇ ಸ್ವಾಮಿ ಪ್ರೇಮಾನಂದರು ಎಂದು. ಅವರು ಶ್ರೀರಾಮಕೃಷ್ಣ ಪರಮಹಂಸರ ನೇರ ಶಿಷ್ಯರು; ಸ್ವಾಮಿ ವಿವೇಕಾನಂದರ ಗುರುಭಾಯಿಗಳು. ಸ್ವಾಮಿ ಪ್ರೇಮಾನಂದರ ಪ್ರೇಮದ ಸ್ಪರ್ಶದಿಂದಾಗಿ ನನ್ನ ಮನಸ್ಸಿನಲ್ಲಿಯೂ ಪ್ರೇಮ ಜಾಗೃತವಾಯಿತು. ನಾನು ಮನಸ್ಸಿನಲ್ಲೇ ಹೇಳಿಕೊಂಡೆ: ''ಸ್ವಾಮಿ ಪ್ರೇಮಾನಂದ! ನಿಮ್ಮ 'ಪ್ರೇಮಾನಂದ' ಎಂಬ ಹೆಸರು ಸಾರ್ಥಕವಾಯಿತು! ತಾವು ಜಿಪುಣತನವಿಲ್ಲದೆ ಎಲ್ಲರಿಗೂ ಪ್ರೇಮವನ್ನು ಹಂಚುತ್ತಿದ್ದೀರಿ. ಆ ಪ್ರೇಮಸಮುದ್ರದ ಅಲೆಗಳಲ್ಲಿ ನನ್ನ ಮನಸ್ಸು ಕೂಡಾ ತೇಲಾಡುತ್ತಿದೆ. ತಮ್ಮ ಪ್ರೇಮ ಜಲದಲ್ಲಿ ಸ್ನಾನ ಮಾಡಿ ಇಂದು ನಾನು ಶುದ್ಧನಾದೆ, ಧನ್ಯನಾದೆ!''

ಶ್ರೀರಾಮಕೃಷ್ಣದೇವರ ದರ್ಶನಕ್ಕಾಗಿ ದೇವಾಲಯದ ಕಡೆಗೆ ಹೋಗುತ್ತಿದ್ದೆ. ದಾರಿಯ ಪಕ್ಕದಲ್ಲಿ ಒಂದೆಡೆ ಒಬ್ಬ ವ್ಯಕ್ತಿ ಹೂವು, ಬತ್ತಾಸು ಇವನ್ನು ಮಾರಾಟ ಮಾಡುತ್ತ ಕುಳಿತ್ತಿದ್ದ. ನಾನು ಒಂದು ಪೈಸೆಗೆ ಹೂ, ಬತ್ತಾಸು ಖರೀದಿಸಿದೆ. ದೇವಾಲಯದಲ್ಲಿ (ಬೇಲೂರು ಮಠದ ಹಳೆಯ ದೇವಾಲಯ) ಆ ಹೂ, ಬತ್ತಾಸುಗಳನ್ನು ಠಾಕೂರರರಿಗೆ ಸಮರ್ಪಿಸಿ, ಪ್ರಣಾಮ ಮಾಡಿದೆ. ಮಂದಿರದ ಹೊರಗೆ ಬಂದು, ಎಲ್ಲೆಲ್ಲಿ ಏನೇನು ನಡೆಯುತ್ತಿದೆ ಎಂಬುದನ್ನೆಲ್ಲ ನೋಡುತ್ತ ಅಲ್ಲಿಲ್ಲಿ ತಿರುಗಾಡಿದೆ. ಸಮಯ ಹನ್ನೊಂದು ಗಂಟೆಯಾಗಿದೆ. ನಾನು ನಿನ್ನೆ ರಾತ್ರಿ ಐದು ಪೈಸೆಗೆ ಕಡಲೆಪುರಿ, ಬತ್ತಾಸು ಕೊಂಡುಕೊಂಡು ತಿಂದಿದ್ದೆ, ಇಲ್ಲಿಯ ತನಕ ಬೇರೇನೂ ತಿಂದಿರಲಿಲ್ಲ. ಇಷ್ಟು ಹೊತ್ತು ಉತ್ಸವದ ಗದ್ದಲದ ನಡುವೆ ಇದ್ದುದರಿಂದ ಹಸಿವು ನನ್ನ ಗಮನಕ್ಕೆ ಬಂದಿರಲಿಲ್ಲ. ಈಗ ಸ್ವಲ್ಪ ಹಸಿದಿದ್ದರೂ ಕೂಡ ಅದು ನನಗೆ ಅತಿಯಾಗಿ ಅನ್ನಿಸತೊಡಗಿತು. ಹಿಂದಿನ ರಾತ್ರಿ ವೃದ್ಧರು ಹೇಳಿದ್ದರು, ಬೇಲೂರು ಮಠದಲ್ಲಿ ಪ್ರಸಾದ ಸಿಗುತ್ತದೆ ಎಂದು. ಅಂತೆಯೇ ನಾನು ಪ್ರಸಾದ ಎಲ್ಲಿ ಸಿಗುತ್ತದೆ ಎಂದು ಹುಡುಕುತ್ತಾ ಹೋದೆ. ಒಂದು ಕಡೆ ಒಬ್ಬ ಯುವಕ ಮಣ್ಣಿನ ತಟ್ಟೆಯಲ್ಲಿ ಪ್ರಸಾದ ಹಂಚುತ್ತಿದ್ದ. ನಾನು ಅಲ್ಲಿಗೆ ಹೋದಾಗ ನನಗೂ ಒಂದು ತಟ್ಟೆ ಕೊಟ್ಟ. ತಟ್ಟೆಯಲ್ಲಿ ಕಿಚಡಿ, ಎರಡು ಪೂರಿ ಹಾಗೂ ಹಲ್ವಾ ಇತ್ತು. (ಕೇಸರಿ ಭಾತ್‌ಗೆ ಬಂಗಾಳದಲ್ಲಿ 'ಹಲ್ವಾ' ಅನ್ನುತ್ತಾರೆ) ಕಡಿಮೆ ಪ್ರಮಾಣದ ಈ ಪ್ರಸಾದ ತಿಂದು ನನ್ನ ಹಸಿವು ಸ್ವಲ್ಪವೂ ನೀಗಲಿಲ್ಲ. ನಾನು ಬಾಂಗ್ಲಾದೇಶದವನು. ಈ ಕಡೆಯವರಿಗೆ ಹೋಲಿಸಿದರೆ ನಾನು ಹೆಚ್ಚು ತಿನ್ನುತ್ತಿದ್ದೆ. ಅದಲ್ಲದೆ, ನಿನ್ನೆ ರಾತ್ರಿಯಿಂದ ಇಲ್ಲಿಯವರೆಗೆ ಏನನ್ನೂ ತಿಂದಿಲ್ಲ. ಇಲ್ಲಿ ನೀಡಿದ ತಟ್ಟೆ ಪ್ರಸಾದವಂತೂ ಸಮುದ್ರದ ನೀರಿನಲ್ಲಿ ಒಂದು ಬಿಂದುವಿನಂತೆ! ಆದ್ದರಿಂದ ಇನ್ನೊಂದು ತಟ್ಟೆ ಕೇಳಿ ಪಡೆದುಕೊಂಡೆ. ಅದರಿಂದಲೂ ಹಸಿವೆ ಇಂಗಲಿಲ್ಲ. ಮೂರನೇ ಸಲ ಪ್ರಸಾದ ಕೇಳಲು ಹೋದಾಗ ಒಬ್ಬರು ಸಂನ್ಯಾಸಿ ಹೇಳಿದರು, ''ಮಹಾಶಯರೆ, ನೀವೆಂಥ ಮನುಷ್ಯರು! ಎರಡು ಬಾರಿ ಪ್ರಸಾದ ತೆಗೆದುಕೊಂಡಿರಿ, — ಮತ್ತೆ ಬರುತ್ತಿದ್ದೀರಿ! ಪ್ರಸಾದ ಕೇವಲ ನಿಮಗಾಗಿ ಅಷ್ಟೇ ಅಲ್ಲ, ಎಲ್ಲರಿಗಾಗಿ.'' ಸಂನ್ಯಾಸಿಗಳ ಮಾತು ಕೇಳಿ ನನಗೆ ಅತ್ಯಂತ ನಾಚಿಕೆಯಾಯಿತು. ಅಪಮಾನವುಂಟಾಗಿ, ನಿನ್ನೆ ರಾತ್ರಿ ಮಾತನಾಡಿದ್ದ ವೃದ್ಧನ ಮೇಲೆ ತುಂಬಾ ಕೋಪ ಬಂತು. ಬೇಕಾದಷ್ಟು ಪ್ರಸಾದ ಸಿಗುತ್ತದೆ ಎಂದು ಅವರೇ ಹೇಳಿದ್ದರು. ಆದ್ದರಿಂದಲೇ ನಾನು ಮತ್ತೆ ಮತ್ತೆ ಪ್ರಸಾದ ಕೇಳಿ ತೆಗೆದುಕೊಂಡಿದ್ದೆ. ಅವರು ಹಾಗೆ ಹೇಳದಿದ್ದರೆ ನಾನು ಬೆಳಿಗ್ಗೆ ಎದ್ದಕೂಡಲೇ ಮನೆಯಲ್ಲಿ ಏನಾದರೂ ತಿಂದೇ ಹೊರಡುತ್ತಿದ್ದೆ. ಒಂದು ತಟ್ಟೆ ಪ್ರಸಾದವೇ ನನಗೆ ಸಾಕಾಗುತ್ತಿತ್ತು. ಸಂನ್ಯಾಸಿಯವರ ಬಾಯಿಂದ ಆ ಮಾತು ಕೇಳಬೇಕಾಗುತ್ತಿರಲಿಲ್ಲ; ಅವರ ಕೋಪಕ್ಕೆ ನಾನು ಪಾತ್ರನಾಗಬೇಕಿರಲಿಲ್ಲ. ದೇವಾಲಯಕ್ಕೆ ಹೋಗಿ ಶ್ರೀರಾಮಕೃಷ್ಣರಿಗೆ ಪ್ರಣಾಮ ಮಾಡಿ ಹೇಳಿದೆ, ''ಠಾಕೂರ್, ತುಂಬಾ ಆಸೆಯಿಟ್ಟುಕೊಂಡು ನಿಮ್ಮ ಬಳಿಗೆ ಬಂದಿದ್ದೆ. ಆದರೆ ಅದು ಪೂರೈಸದೆ ಮರಳಿ ಹೋಗು ತ್ತಿದ್ದೇನೆ.'' ಹೀಗೆ ಹೇಳಿ, ಗಂಗಾತೀರಕ್ಕೆ ಹೋಗಿ, ನೀರು ಕುಡಿದೆ. ಸ್ಟೀಮರ್‌ಗಳು ಇರುವ ಘಾಟ್‌ನತ್ತ ನಾನು ನಡೆಯುತ್ತ ಸಾಗಿದೆ. ದಾರಿಯಲ್ಲಿ ಒಂದು ಖರ್ಜೂರದ ಮರದ ಕೆಳಗೆ ಕೆಲವು ಮಂದಿ ಒಂದು ಬುಟ್ಟಿ ತುಂಬಾ ಇದ್ದ ಖಿಚಡಿ, ತರಕಾರಿ, ಚಟ್ನಿ ಇವುಗಳನ್ನು ತಿನ್ನುತ್ತಿದ್ದರು. ಅಲ್ಲಿಗೆ ಹೋದಾಗ ಅವರು ನನಗೂ ಒಂದು ದೊನ್ನೆ ಕೊಟ್ಟರು. ಅದರಲ್ಲಿ ಖಿಚಡಿ, ತರಕಾರಿ, ಚಟ್ನಿ ಇದ್ದವು. ನಾನು ತೃಪ್ತಿಯಾಗುವಷ್ಟು ತಿಂದೆ. ಶ್ರೀರಾಮಕೃಷ್ಣರಿಗೆ ಹೇಳಿದೆ, ''ಠಾಕೂರ್, ನನ್ನ ಆಸೆ ಪೂರೈಸಲಿಲ್ಲ ಎಂದು ನಾನು ದೂರಿದ್ದೆ. ಅರೆಹೊಟ್ಟೆ ತಿಂದ ಕಾರಣ ನನ್ನ ಆಸೆ ಪೂರೈಸಲಿಲ್ಲ ಎಂದು ತಿಳಿದು, ನೀವು ಆಹಾರ ನೀಡಿ ನನ್ನ ಆಸೆ ಪೂರೈಸಿದಿರಿ. ಈಗ ನನಗೆ ಅನ್ನಿಸುತ್ತದೆ, ನಿಮ್ಮ ಬಳಿ ದೂರಿದ್ದು ತಪ್ಪಾಯಿತು ಎಂದು. ನೀವು ನಮಗಾಗಿ ಎಷ್ಟೊಂದು ನೀಡಿದ್ದೀರಿ ಎಂಬುದನ್ನು ತಿಳಿಯದೆ, 'ನನ್ನ ಆಸೆ ಪೂರೈಸದೆ ಮರಳಿ ಹೋಗುತ್ತಿದ್ದೇನೆ' ಎಂದು ಸ್ವಾರ್ಥಭಾವದಿಂದ ದೂರಿದ್ದೆನಲ್ಲ! ನಾನು ಅಧಮ, ಕೃತಘ್ನ, ನನ್ನನ್ನು ಕ್ಷಮಿಸಿ, ಠಾಕೂರ್!'' ಹೀಗೆ ಹೇಳುತ್ತ ಠಾಕೂರರಿಗೆ ಕೈಜೋಡಿಸಿ ಪ್ರಣಾಮ ಮಾಡಿದೆ. ಸಂಜೆ ಐದಕ್ಕೆ ಸ್ಟೀಮರ್

ಹೊರಡುವುದು. ಈಗ ಗಂಟೆ ಒಂದು–ಎರಡು ಇರಬೇಕಷ್ಟೆ. ಒಂದು ಮರದ ಕೆಳಗೆ ಅಡ್ಡಪಂಚೆ ಹರಡಿ, ಅದರ ಮೇಲೆ ಮಲಗಿ ನಿದ್ರಿಸಿದೆ. ಸರಿಯಾದ ಸಮಯಕ್ಕೆ ಸ್ಟೀಮರ್ ಮೂಲಕ ಮರಳಿ ಬಂದೆ. ಆದರೆ ನನ್ನ ಮನಸ್ಸನ್ನು ಬೇಲೂರು ಮಠದ ಶ್ರೀರಾಮ ಕೃಷ್ಣರೆಂಬ ವೃಕ್ಷದ ನೆರಳಿನಲ್ಲೇ ಬಿಟ್ಟುಬಂದೆ.

ನನ್ನ ಅಂಗಡಿ ಮುಂದುವರಿಯಲಿಲ್ಲ. ಅಲ್ಲಿಂದ ಜಾಗ ಖಾಲಿ ಮಾಡಬೇಕಾಯಿತು. ೫–೬ ದಿನಗಳ ನಂತರ, ಒಂದು ದಿನ ಬೆಳಿಗ್ಗೆ ನಿದ್ದೆಯಿಂದೆದ್ದು ಕೈಕಾಲು ಮುಖ ತೊಳೆದು ಕುಳಿತುಕೊಂಡಿದ್ದಾಗ ಅನ್ನಿಸಿತು: ಇನ್ನೀಗ ನಾನು ಹೇಗೆ ಜೀವನ ನಡೆಸಲಿ? ಅಷ್ಟರಲ್ಲಿ ನನ್ನ ದೊಡ್ಡಣ್ಣ ನನಗೆ ಹೇಳಿದರು, ''ಚಂದ್ರ, ನಿನ್ನ ಕೈಯಲ್ಲಿ ವ್ಯಾಪಾರ–ಗೀಪಾರ ಸಾಧ್ಯವಿಲ್ಲ. ಎಲ್ಲಾದರೂ ಕೂಲಿನಾಲಿ ಮಾಡಿಕೊಂಡಿರು. ನಿನ್ನನ್ನು ನೋಡಿಕೊಂಡಿರುವುದು ಇನ್ನು ನನ್ನಿಂದಾಗದು.'' ದೊಡ್ಡಣ್ಣನ ಬಾಯಿಯಿಂದ ಈ ಮಾತನ್ನು ಕೇಳಬೇಕಾದೀತು ಎಂದು ನಾನು ಕನಸಿನಲ್ಲಿಯೂ ಯೋಚಿಸಲಿರಲಿಲ್ಲ. ಇನ್ನೂ ನಮ್ಮ ಸಂಸಾರ ಪಾಲಾಗಿಲ್ಲ, ಹೀಗಿರುವಾಗ ದೊಡ್ಡಣ್ಣ ಹೀಗೇಕೆ ಹೇಳಿದ? ದೊಡ್ಡಣ್ಣನೇ ಸಂಸಾರದಿಂದ ಬೇರಾಗಿ ಬಿಟ್ಟನೆ? ನನಗೊಂದೂ ಅರ್ಥವಾಗಲಿಲ್ಲ. ಊಟ, ಬಟ್ಟೆ ಕುರಿತು ಈ ರೀತಿ ಚುಚ್ಚು ಮಾತುಗಳನ್ನು ಕೇಳಿ, ಅಪಮಾನದಿಂದ ನನ್ನ ದೇಹದಲ್ಲೆಲ್ಲ ಬೆಂಕಿಯೆದ್ದಂತಾಯಿತು. ದೊಡ್ಡಣ್ಣನಿಗೆ ಎದುರು ಮಾತನಾಡುವುದೂ ಸಾಧ್ಯವಿಲ್ಲ. ನಾನು ಮೊದಲೇ ಹಟಮಾರಿ, ಮೊಂಡುತನದಿಂದ ಕೂಡಿದವನು. ಇಂದೇ ನಾನು ಒಂದು ಕೆಲಸ ಹುಡುಕಿಕೊಳ್ಳುತ್ತೇನೆ, ಸಿಗದಿದ್ದರೆ ಕಲ್ಕತ್ತ ಬಿಟ್ಟು ಪಶ್ಚಿಮ ಪ್ರಾಂತಕ್ಕೆ ಹೊರಟುಹೋಗುತ್ತೇನೆ, ಅಣ್ಣನ ಅನ್ನಕ್ಕೆ ಬೀಳಲಾರೆ ಎಂದು ಪ್ರತಿಜ್ಞೆ ಮಾಡಿಕೊಂಡೆ. ಜ್ಯೇಷ್ಠಮಾಸದ ಸೆಖೆ ಬೇರೆ; ಜೊತೆಗೆ ಅಪಮಾನದಿಂದ ತಲೆಯೂ ಬಿಸಿಯಾಗಿದೆ. ಉಟ್ಟ ಬಟ್ಟೆಯಲ್ಲೇ, ಮೈಮೇಲೆ ಒಂದು ಅಡ್ಡಪಂಚೆ ಹಾಕಿಕೊಂಡು ಕೆಲಸ ಹುಡುಕಲು ಹೊರಟೆ. ಕೈಯಲ್ಲಿ ಐದು ಪೈಸೆಯಷ್ಟೇ ಇತ್ತು . ಅದರಲ್ಲಿ ಒಂದು ಪೈಸೆಗೆ ಗಂಗೆಯ ಘಾಟ್‌ನಲ್ಲಿದ್ದ ಒಡಿಶಾದ ಪಂಡಾ ಬ್ರಾಹ್ಮಣದಿಂದ ಎಣ್ಣೆ ಕೊಂಡುಕೊಂಡೆ. ಮೈಗೆಲ್ಲ ಎಣ್ಣೆ ಹಚ್ಚಿ ಸ್ನಾನ ಮಾಡಿದೆ. ಉಳಿದ ಇನ್ನೊಂದು ಆಣೆಯನ್ನು ಗಂಗಾಮಾತೆಗೆ ಸಮರ್ಪಿಸಿ ಹೇಳಿದೆ: ''ಇಂದಿನ ದಿನವೇ ನನಗೆ ಕೆಲಸ ಸಿಕ್ಕಿದರೆ ಒಳ್ಳೆಯದು. ಇಲ್ಲದಿದ್ದರೆ ರೈಲು ಹಳಿಯನ್ನು ಹಿಡಿದು ಎಲ್ಲಿ ತನಕ ಕಾಣಿಸುತ್ತದೋ ಅಲ್ಲಿ ತನಕ, ಪಶ್ಚಿಮದತ್ತ ನಡೆಯುತ್ತಾ ಹೋಗುವೆ.'' ಹೀಗೆ ಹೇಳುತ್ತ ಘಾಟ್‌ನ ಮೆಟ್ಟಿಲಲ್ಲಿ ಕುಳಿತು ಯೋಚಿಸತೊಡಗಿದೆ.

*(ಮುಂದಿನ ಸಂಚಿಕೆಗೆ)*


## ರಾಮಕೃಷ್ಣ ಮಿಷನ್ ಬಾಲಕಾಶ್ರಮ

**ಉಚಿತ ವಿದ್ಯಾರ್ಥಿನಿಲಯ (ಶಿಕ್ಷಣ–ಊಟ–ವಸತಿ ಸೌಲಭ್ಯಗಳು)**
**ಮಂಗಳಾದೇವಿ, ಮಂಗಳೂರು. 575 001**
**ಫೋನ್: 0824–2414216**
email: rkmbalakashrama@gmail.com

### ಮಂಗಳೂರಿನ ರಾಮಕೃಷ್ಣ ಮಿಷನ್ನಿನ ಉಚಿತ ವಿದ್ಯಾರ್ಥಿ ನಿಲಯಕ್ಕೆ ಅರ್ಜಿ ಆಹ್ವಾನ

ಆರ್ಥಿಕವಾಗಿ ಹಿಂದುಳಿದ ಗ್ರಾಮೀಣ ಪ್ರದೇಶದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಶಿಸ್ತುಬದ್ಧ ವಿದ್ಯಾಭ್ಯಾಸ ನೀಡುವ ಉದ್ದೇಶದಿಂದ ಮಂಗಳೂರು ಶ್ರೀರಾಮಕೃಷ್ಣ ಮಿಷನ್ ಬಾಲಕಾಶ್ರಮವು ಅರ್ಹ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಆಶ್ರಮದ ಪವಿತ್ರವಾದ ವಾತಾವರಣದಲ್ಲಿ, ಆಶ್ರಮವಾಸಿಗಳಾದ ಸ್ವಾಮೀಜಿಯವರ ಮೇಲ್ವಿಚಾರಣೆಯಲ್ಲಿ ವಿದ್ಯಾರ್ಥಿಗಳಿಗೆ ಶಿಕ್ಷಣ ಮತ್ತು ಸರ್ವತೋಮುಖ ಬೆಳವಣಿಗೆಗೆ ಬೇಕಾದ ಜೀವನ ಮೌಲ್ಯಗಳನ್ನು ತಿಳಿಸಿಕೊಡಲಾಗುತ್ತದೆ. ಶಿಕ್ಷಣ, ಊಟ, ವಸತಿಗಳನ್ನು ಉಚಿತವಾಗಿ ಒದಗಿಸಲಾಗುವುದು.

**ಅರ್ಜಿ ಸಲ್ಲಿಸಬಯಸುವವರಿಗೆ ಸೂಚನೆಗಳು:** 7 ನೇ ತರಗತಿಯಲ್ಲಿ ಉತ್ತಮ ಶ್ರೇಣಿಯಲ್ಲಿ ಉತ್ತೀರ್ಣರಾದ, **ಗಂಡುಮಕ್ಕಳು** ಮಾತ್ರ ಅರ್ಜಿಯನ್ನು ಸಲ್ಲಿಸಬಹುದು. **8 ನೇ ತರಗತಿಗೆ ಮಾತ್ರ ಪ್ರವೇಶ.** ರಾಜ್ಯದ ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು ಹಾಗೂ ಕಾಸರಗೋಡು ಈ ಜಿಲ್ಲೆಗಳ ವಿದ್ಯಾರ್ಥಿಗಳು ಇದರ ಸದುಪಯೋಗವನ್ನು ಪಡೆದಿರುತ್ತಾರೆ. ಮೊದಲು ಬಂದವರಿಗೆ ಆದ್ಯತೆ ನೀಡಲಾಗುವುದು.

**ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 26.4.2020, ಭಾನುವಾರ**

ಅರ್ಜಿ, ನಿಯಮಾವಳಿಯ ಪ್ರತಿ ಹಾಗೂ ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :

**ರಾಮಕೃಷ್ಣ ಮಿಷನ್ ಬಾಲಕಾಶ್ರಮ, ಮಂಗಳಾದೇವಿ, ಮಂಗಳೂರು, 575 001**
ಫೋನ್: 0824–2414216 email: rkmbalakashrama@gmail.com
**(ಸಮಯ: ಬೆಳಿಗ್ಗೆ 8 ರಿಂದ ಮಧ್ಯಾಹ್ನ 12 ರವರೆಗೆ ಮತ್ತು ಸಂಜೆ 4 ರಿಂದ 6.00 ಗಂಟೆಯವರೆಗೆ)**